964 ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಡಿಕಲ್ ಸ್ಟೋರ್‌ಗಳಲ್ಲಿ ಮಾರಾಟ ಮಾಡುವ ಔಷಧಿಗಳ ಬೆಲೆ ಒಂದು ಅಂಗಡಿಗಿಂತ ಇನ್ನೊಂದು ಅಂಗಡಿಯಲ್ಲಿ ವ್ಯತ್ಯಾಸ ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಬೆಲೆಯಲ್ಲಿ ವ್ಯತ್ಯಾಸ ಇದ್ದರೂ ಸಹ ಸರ್ಕಾರದ ಔಷಧಿಗಳ ನಿಯಂತ್ರಣ ಸಂಸ್ಥೆಯು ಕೈಗೊಂಡಿರುವ ಕ್ರಮಗಳೇನು, ಇದನ್ನು ಸರಿಯಾಗಿ ಉಸ್ತುವಾರಿ ನಡೆಸಲಾಗುತ್ತಿದೆಯೇ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಔಷಧಿಯ ಮಾರಾಟಗಾರರು ನಿಜವಾದ ಬೆಲೆ ಮೇಲೆ ಶೇಕಡವಾರು 30 ರಿಂದ 40 ರವರೆಗೆ ಹೆಚ್ಚಿನ ಲಾಭವನ್ನು ಪಡೆಯುತ್ತಿರುವುದು ಸರಿಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅನೇಕ ರೋಗಗಳಿಂದ ಬಳಲುತ್ತಿರುವ ಬಡರೋಗಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?

ಈ) ಹಾಗಿದ್ದಲ್ಲಿ, ಇದರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಯಾವುದೇ ಔಷಧಿ ಅಂಗಡಿಯವರು ಔಷಧಿಯ ಲೇಬಲ್ ಮೇಲೆ ನಮೂದಿಸಿದ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡು ಬಂದಲ್ಲಿ ಅವರ ವಿರುದ್ಧ ಅವಶ್ಯಕ ವಸ್ತು ಕಾಯಿದೆ 1955 ಮತ್ತು ಔಷಧ ಬೆಲೆ ನಿಯಂತ್ರಣ ಆದೇಶ 1995 ರ ಮೇರೆಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು

ಅಂತಹ ಪ್ರಕರಣಗಳನ್ನು ಉಪ ಔಷಧ ನಿಯಂತ್ರಕರ ನೇತೃತ್ವದಲ್ಲಿರುವ ಬೆಲೆ ನಿಯಂತ್ರಣ ಕೋಶದ ಅಧಿಕಾರಿಗಳು ಉಸ್ತುವಾರಿ ಮಾಡುತ್ತಿರುತ್ತಾರೆ

ಇ) 1995ರ ಕೇಂದ್ರ ಸರ್ಕಾರದ ಔಷಧ ಬೆಲೆ ನಿಯಂತ್ರಣ ಆದೇಶದ ಮೇರೆಗೆ ಅನುಸೂಚಿತ ಔಷಧಿಗಳ ಗರಿಷ್ಠ ಮಾರಾಟ ಬೆಲೆಗಳನ್ನು ಮತ್ತು ಔಷಧಿ ಮಾರಾಟಗಾರರ ಲಾಭಾಂಶವನ್ನೂ ರಾಷ್ಟ್ರೀಯ ಫಾರ್ಮಾಸ್ಯೂಟಿಕಲ್ ಪ್ರೈಸಿಂಗ್ ಪ್ರಾಧಿಕಾರದ ಮೂಲಕ ಕೇಂದ್ರ ಸರ್ಕಾರವೇ ನಿಗದಿಪಡಿಸುತ್ತದೆ ನಿಗದಿತ ಬೆಲೆಗಳಲ್ಲಿ

ನಿರಂತರವಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳು ಎಲ್ಲಾ ಕಾಲಗಳಲ್ಲೂ ಲಭ್ಯವಾಗುವಂತೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ಈ ಬೆಲೆ ನಿಯಂತ್ರಣ ಆದೇಶ 1995ನ್ನು ಹೊರಡಿಸಿರುತ್ತದೆ

ಈ) ಸಾರ್ವಜನಿಕರು ನಿಗಧಿತ ಬೆಲೆಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರೆ, ಅಂತಹ ಪ್ರಕರಣಗಳನ್ನು ಔಷಧ ನಿಯಂತ್ರಣ ಇಲಾಖೆಯ ಬೆಲೆ ನಿಯಂತ್ರಣ ಕೋಶಕ್ಕೆ ತಿಳಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು

635 (1074) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರೇ ತಿಳಿಸಿದಂತೆ ಜನರಲ್ ಸ್ಟೋರ್‌ನಿಂದ ಸರಬರಾಜಾಗುತ್ತಿರುವ ಔಷಧಿಗಳು ನೂರಕ್ಕೆ ಅರವತ್ತು ಭಾಗ ಅನುಪಯುಕ್ತ ಎಂದು ಹೇಳಲ್ಪಡುತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಅನುಪಯುಕ್ತ ಔಷಧಿಗಳನ್ನು ನೀಡುವುದರಿಂದ ಬಡವರಿಗೆ ಅನ್ಯಾಯವಾಗುವುದಿಲ್ಲವೇ? ಇದರ ಉದ್ದೇಶವಾದರೂ ಏನು?

ಇ) ಇದನ್ನು ನಿಯಂತ್ರಿಸಿ ಆಸ್ಪತ್ರೆಯ ವೈದ್ಯರು ಕೇಳುವ ಔಷಧಿಗಳನ್ನು ಸರಬರಾಜು ಮಾಡಲಾಗುವುದೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಸರ್ಕಾರ ಅನುದಾನ ನಿಗಧಿಗೊಳಿಸಿದೆ ನಿಗಧಿಗೊಳಿಸಿರುವ ಅನುದಾನಕ್ಕೆ ತಕ್ಕಂತೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವರ ಆಸ್ಪತ್ರೆಯಲ್ಲಿ ರಚಿತವಾಗಿರುವ ಆಂತರಿಕ ಸಮಿತಿಯ ಶಿಫಾರಸ್ಸಿನಂತೆ ಆಸ್ಪತ್ರೆಯ ಬಳಕೆಗೆ ಅನುಗುಣವಾಗಿ ಔಷಧಿಗಳನ್ನು ಆಯ್ಕೆ ಮಾಡಿ ಬೇಕಾಗಿರುವ ಪ್ರಮಾಣಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಾರೆ

ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಔಷಧಿಗಳನ್ನು ಮೂಲ ಉತ್ಪಾದಕರಿಂದ ದರಗುತ್ತಿಗೆ ದರಗಳಲ್ಲಿ ಖರೀದಿಸಿ, ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗುತ್ತಿದೆ